**<u>ಅಪರ ಸಿವಿಲ್‌ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ</u>**

**<u>ಸಿ.ಸಿ. ಸಂಖ್ಯೆ: 3438/2022</u>**

ಫಿರ್ಯಾಧಿದಾರರು : ಚನ್ನಪಟ್ಟಣ ಪುರ ಪೋಲೀಸ್ ಠಾಣೆ

-- ವಿರುದ್ದ--

ಆರೋಪಿತರು :

1. ಸರ್ವರ್ ಖಾನ್
   ಬಿನ್ ಅನ್ವರ್
   ವಯಸ್ಸು: 34 ವರ್ಷ,

2. ಫಯಾಜ್ ಉಲ್ಲಾ ಬಿನ್ ಲೇಟ್ ಅನ್ವರ್
   ಖಾನ್, ವಯಸ್ಸು: 27 ವರ್ಷ,
   ಇಬ್ಬರೂ ವಾಸ: ಇಂದಿರಾ ಕಾಟೇಜ್,
   ಚನ್ನಪಟ್ಟಣ ಟೌನ್, ರಾಮನಗರ.

3. ರಕ್ಷಿತ್ ಕುಮಾರ್ ಬಿ.ವಿ.
   ಬಿನ್ ವೆಂಕಟೇಶ್
   ವಯಸ್ಸು: 21 ವರ್ಷ,

2. ರಂಜಿತ್ ಬಿ.ವಿ. ಬಿನ್ ವೆಂಕಟೇಶ್,
   ಖಾನ್, ವಯಸ್ಸು: 23 ವರ್ಷ,
   ಇಬ್ಬರೂ ವಾಸ: 1 ನೇ ಕ್ರಾಸ್, ಅಪ್ಪಗೆರೆ,
   ಚನ್ನಪಟ್ಟಣ ಟೌನ್, ರಾಮನಗರ.

**<u>ದೋಷಾರೋಪಣೆ</u>**

ಚನ್ನಪಟ್ಟಣ ಟೌನ್ ಪೊಲೀಸ್ ಠಾಣಾ ಸರಹದ್ದು ಚನ್ನಪಟ್ಟಣ ಟೌನ್ ಇಂದಿರಾ ಕಾಟೇಜ್, ಸಾತನೂರು ರಸ್ತೆಯಲ್ಲಿ ದಿ: 08.06.2022 ರಂದು ಸಂಜೆ 6.30 ಗಂಟೆ ಸಮಯದಲ್ಲಿ 1 ನೇ ಆರೋಪಿ ಗಾಂಜಾ ಮಾರಾಟ ಮಾಡುತ್ತಿದ್ದು 2 ರಿಂದ 4 ನೇ ಆರೋಪಿಗಳು ಗಾಂಜಾ ಸೇವನೆ ಮಾಡಲು ಕೊಂಡು ಕೊಳ್ಳುತ್ತಿರುತ್ತಾರೆಂದು ಚಾಸಾ 1 ರವರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಚಾಸಾ 1 ರವರು ಚಾಸಾ 2 ರವರ ನೇತೃತ್ವದಲ್ಲಿ ಪಂಚರಾದ ಚಾಸಾ 3 ಮತ್ತು 4 ರವರ ಸಮಕ್ಷಮ ಚಾಸಾ 5 ರಿಂದ 9 ರವರುಗಳ ಸಹಾಯದಿಂದ ದಾಳಿ ಮಾಡಿ ಆರೋಪಿಯನ್ನು ವಶಕ್ಕೆ ಪಡೆದು ಚಾಸಾ 2 ರವರಿಂದ ಅಂಗಶೋಧನೆ ಮಾಡಲಾಗಿ 1

ನೇ ಆರೋಪಿ ಬಳಿ 10 ಗ್ರಾಂ ಗಾಂಜಾ ಸೊಪ್ಪು ಹಾಗೂ ಗಾಂಜಾವನ್ನು ಮಾರಾಟ ಮಾಡಿ ಗಳಿಸಿದ್ದಂತಹ ರೂ,300/- ಹಣ, 06 ಚಿಕ್ಕ ಖಾಲಿ ಪ್ಲಾಸ್ಟಿಕ್ ಕವರ್ ಗಳನ್ನು ಹಾಗೂ 2 ರಿಂದ 4 ನೇ ಆರೋಪಿ ಬಳಿ ಇದ್ದ ಚಿಕ್ಕ 02 ಗ್ರಾಂ ತೂಕದ 03 ಕವರ್ ಗಾಂಜಾ ಸೊಪ್ಪನ್ನು ಅಮಾನತ್ತುಪಡಿಸಿಕೊಂಡಿದ್ದು, ಸದರಿ 1 ನೇ ಆರೋಪಿ ಗಾಂಜಾವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಹಾಗೂ 2 ರಿಂದ 4 ನೇ ಆರೋಪಿ ಗಾಂಜಾ ಸೇವನೆ ಮಾಡಲು ಕೊಂಡುಕೊಳ್ಳುತ್ತಿರುವುದು ಕಂಡು ಬಂದಿದ್ದು ನೀವು ಕಲಂ.20(B) **Narcotic Drugs And Psychotropic Substances Act** 1985 ರ ರೀತಿ ಅಪರಾಧ ಮಾಡಿರುವೆ ಎಂಬುದಾಗಿದೆ. ಇದು ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುತ್ತದೆ.

**(ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ಧೃಢೀಕರಿಸುತ್ತೇನೆ.)**

ದಿನಾಂಕಃ 28.04.2023.

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ,. ಚನ್ನಪಟ್ಟಣ.

## <u>ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.</u>

<u>ಸಿಸಿ ಸಂಖ್ಯೆ:**4638/2022**</u>

| ಪಿರ್ಯಾದುದಾರರು | ಆರೋಪಿತರು |
|---|---|
| ಚನ್ನಪಟ್ಟಣ ಪುರ ಪೋಲೀಸ್ ಠಾಣೆ | ??????? ಸರ್ವರ್ ಖಾನ್ ಮತ್ತು ಇತರರು |

- ವಿರುದ್ಧ -

## <u>ಆರೋಪಿತರ ಹೇಳಿಕೆ</u>

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ: ಎ 1. ಎ 3.

ಎ 2. ಎ 4.

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ: ಎ 1. ಎ 3.

ಎ 2. ಎ 4.

**(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿರಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)**

ದಿನಾಂಕ: 28.04.2023

**ಅಪರ ಸಿವಿಲ್ ಜಡ್ಜ್ ಮತ್ತು**

**ಜೆ.ಎಂ.ಎಫ್.ಸಿ,. ಚನ್ನಪಟ್ಟಣ.**